321

ಷರತ್ತುಗಳು:—ವಿಕ್ರಯದ ಮೊಬಲಗಿನ ಪೈಕಿ ಕೇಕಡಾ 25 ರೂಪಾಯಿನಂತೆ ಡಿಪಾಜಿಟ್ ಮೊಬಲಗು ತಕ್ಷಣ ಹಾಜರ್ಮಾಡಬೇಕು, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು ವಂದುವಾರದ ವಳಗೆ ಫಾವತಿ ಮಾಡಬೇಕು, ತಪ್ಪಿದಲ್ಲಿ ಪುನಹ ಹರಾಜು ಮಾಡಲ್ಪಡುತ್ತೆ. ಯಿದರಿಂದ ಉಂಟಾಗತಕ್ಕ ಲುಕ್ಸಾನಿಗೆ ಮೊದಲು ಹರಾಜಿನಲ್ಲಿ ಪಡದವರನ್ನೆ ಗುರಿಮಾಡಲ್ಪಡುತ್ತೆ. ಸಾರ್ಮಾಗಳು ಹರಾಜು ತಾರೀಖು ಲಾಗಾಯಿತ್ ಹತ್ತು ದಿವಸಗಳೊಳಗಾಗಿ ತೆಗದುಕೊಂಡು ಹೋಗಬೇಕು, ಇತರ ತಪಶೀಲುಗಳನ್ನ 1877ನೇ ಇಸವಿ ಸೆಪ್ಟಂಬರು 3ನೇ ಮತ್ತು ಂ 35ನೇ ನಂಬರ್ ಮೈಸೂರು ಗೆಜಿಟ್ 1ನೇ ಭಾಗದಲ್ಲಿ ಫಾಯಿಷ್ ಮಾಡಿರುವ ಅದೇ ಇಸವಿ ಆಗಸ್ಟ್ 30ನೇ ಮತ್ತು ಂ 99ನೇ ನಂಬರ್ ಇಸ್ತಿಹಾರಿನಲ್ಲಿ ನೋಡತಕ್ಕದ್ದು.

ಬಿ. ಶ್ರೀನಿವಾಸರಾವ್,
ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕ್ಯಸರ್ವೇಟರವರು.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 22ನೇ ಷಿಪ್ರೆಲ್ 1890.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಕಂಡ ತಾಲ್ಲೂಕುಗಳಲ್ಲಿನ ಹಿಡುವಳಿಯಲ್ಲಿ ಯಿಲ್ಲದ ಕಂದಾಯ ಗೊತ್ತಿಲ್ಲದಂತಾ ಮತ್ತು ಗೊತ್ತು ಮಾಡಲ್ಪಟ್ಟ ಜಮೀರ್ಗಳು ಅಡಗಿ ಯಿರುವಂಥಾ ಮತ್ತು ಹಳೆ ಮತ್ತು ಹೊಸ ಲೈನುಗಳ ಮಧ್ಯೆ ಯಿರುವ ಡಿಸ್ಟ್ರಿಕ್ಟ ಫಾರೆಸ್ಟುಗಳ, ಗ್ರಾಮ ಬೇಲಿಗಳ, ಅಮೃತಮಹಲ್ ಕಾವಲ್‌ಗಳ, ಪ್ಲಾಂಟೇಷ್ಗಳು, ಸಂದಲ್ ರಿಪ್ರೊಡಕ್ಷ್ ಬ್ಲಾಕ್ ವಿನಹ ಅಮರಾಯಿ ಮತ್ತು ಅಮರಾಯಿ ಬೇಲಿಗಳ ಪಸಾರೆ ಹುಟ್ಟುವಳಿಗಳನ್ನ 1890ನೇ ಇಸವಿ ಮೇ ಮಾಹೆ ಗುರ್ರೇ ತಾರೀಖು ಲಾಗಾಯತು 1891ನೇ ಇಸವಿ ಏಪ್ರೆಲ್ 30ನೇ ತಾರೀಖು ವರಿಗೆ ಜವಾಯಿಸುವ ಹಕ್ಕುದಾರಿಯು ಯಾವ ರೀತಿ ಹರಾಜು ಮಾಡಿದಲ್ಲಿ ಸರ್ಕಾರಕ್ಕೆ ಬರಬಹುದೆಂದು ಅವರಿಗೆ ಸೂಕ್ತ ತೋರುತ್ತೋ ಆ ಮೇರೆ ಆಯಾಯ ತಾಲ್ಲೂಕು ಅಮಲ್ದಾರ್ರು ರೂಬರೂ ಹೋಬಳಿವಾರ್ ಅಥವಾ ಒಟ್ಟು ತಾಲ್ಲೂಕುವಾರ್ ಇದರಡೀಕಂಡ ತಾರೀಖುಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ತಾಲ್ಲೂಕು.		ತಾರೀಖು.
ಮೈಸೂರು	..	1ನೇ ಮೇ
ಯಡತೊರೆ	..	3ನೇ ಮೇ
ನಾಗಮಂಗಲ	..	5ನೇ ಮೇ
ಅತ್ತಿಕುಪ್ಪೆ	..	7ನೇ ಮೇ
ಮಂಡ್ಯ	..	9ನೇ ಮೇ
ಶ್ರೀರಂಗಪಟ್ಣ	..	12ನೇ ಮೇ
ತಿರುಮಕೂಡ್ಲು ನರಶೀಪುರ		14ನೇ ಮೇ
ಮಳವಳ್ಳಿ	..	19ನೇ ಮೇ
ಹುಣಸೂರು	..	16ನೇ ಮೇ
ಹೆಗ್ಗಡದೇವನಕೋಟೆ	..	23ನೇ ಮೇ
ನಂಜನಗೂಡು	..	20ನೇ ಮೇ
ಗುಂಡ್ಲು ಪೇಟೆ	..	28ನೇ ಮೇ
ಚಾಮರಾಜನಗರ	..	31ನೇ ಮೇ

ಹುಟ್ಟುವಳಿ ತಪಸೀಲ್.

(1) ಅಳಲೆಕಾಯಿ
(2) ತಾರೇಕಾಯಿ
(3) ಶೀಗೆಕಾಯಿ
(4) ಅಂಟುವಾಳದ ಕಾಯಿ
(5) ದಿಂಡಿಗದ ಗೋಂದು
(6) ಕಾಡು ಅರಶಿನ
(7) ಜೇನುತುಪ್ಪ ಮತ್ತು ಈ ಮೇಣ
(8) ಅರಗು ಅಂದರೆ ಮೇಲುಕೋಟೆ ಜಂಗಲಿನ ಉತ್ಪತ್ತಿ ವಿನಹ ತಾಲ್ಲೂಕುವಾರ್ ಬಾಕಿ ಯಿರತಕ್ಕದ್ದು.
(9) ಕಪಿಲೇ ರಂಗು
(10) ಪತಂಗ
(11) ಮಡ್ಡಿ
(12) ಚಿಲ್ಲದ ಬೀಜ
(13) ಚಕಗತೇಬೀಜ
(14) ಹೊಂಗೇ ಬೀಜ
(15) ಗೇರು ಬೀಜ
(16) ಹಾಲುಮಡ್ಡಿ
(17) ಆವರಿಕೆ ಮೇಣ
(18) ಜಿಂಕೆ ಕೊಂಬು
(19) ಗುಗ್ಗಳ ವಗೈರೆ

(2.) ಕಂಟ್ರಾಕ್ಟುದಾರರಿಗೆ ಹಿಡುವಳಿ ಜಮೀರ್ಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳ ಹುಟ್ಟುವಳಿಗೆ ಹಕ್ಕು ಯಿರುವದಿಲ್ಲ.

(3.) ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಹುಟ್ಟುವಳಿಗಳಲ್ಲಿ ಅಡಗಿ ಯಿರುವದು ಯಿಲ್ಲ.

(4.) ಚಡ ದರಖಾಸ್ತುದಾರನು ಹರಾಜು ಮೊಬಲಗು ಪೈಕಿ ಕೇಕಡಾ 25ರಂತೆ ಆಗುವ ಮೊಬಲಗನ್ನ ಕೂಡ್ಲೆ ಲೇವಣಿ ಕಟ್ಟ ತಕ್ಕದ್ದು. ಉಳಿದ ಮೊಬಲಗನ್ನು ಡಿಸ್ಟ್ರಿಕ್ಟು ಯಾ ತಾಲ್ಲೂಕು ಟ್ರೆಜರಿಯಲ್ಲಿ 3 ಸಮನಾದ ಖಿಸ್ತುಗಳಿಂದ ಅಂದರೆ 1890ನೇ ಇಸವಿ ಅಕ್ಟೋಬರ್ 1 ನವಂಬರ್ 1 ಮತ್ತು ಡಿಸಂಬರ್ 1ನೇ ತಾರೀಖುಗಳಲ್ಲಿ ಕ್ರಮವಾಗಿ ಫಾವತಿ ಮಾಡತಕ್ಕದ್ದು.

(5.) ಕಂಟ್ರಾಕ್ಟ್ದಾರನು ಯಾವನಾದರೂ ಖಿಸ್ತು ವಾಯಿದೆಗೆ ಸರಿಯಾಗಿ ಮೊಬಲಗು ಪಾವತಿ ಮಾಡದೇ ಹೋದ್ದಪ್ಪಿದರೆ ಫಾರೆಸ್ಟ್ ಹುಟ್ಟುವಳಿಯನ್ನು 1891ನೇ ಇಸವಿ ಏಪ್ರಿಲ್ 30ನೇ ತಾರೀಖಿನ ವರಿಗಿನ ಉಳಿದ ಕಾಲಕ್ಕೆ ಜಮಾಯಿಸುವ ಹಕ್ಕುದಾರಿಯು ಫಾರೆಸ್ಟ್ ಇಲಾಖೆಯವರಿಂದ ಪುನಹ ವಿಕ್ರಯಿಸಲ್ಪಡುವದು ಅಥವಾ ಅವಾನಿಯಲ್ಲಿ ರೂಢಿಸಲ್ಪಡುವದು, ಪರಂತು ಹೊಟ್ಟಿಹೋದ ಕಂಟ್ರಾಕ್ಟ್ದಾರನು ಅದರಿಂದ ಉಂಟಾಗುವ ಯಾವ ನಷ್ಟಕ್ಕಾಗಲಿ ಗುರಿಯಾಗಿರತಕ್ಕದ್ದು.

(6.) ಅಮಲ್ದಾರ್ರುಗಳಿಂದ ಮಾಡಲ್ಪಟ್ಟ ಹರಾಜುಗಳ ಪೈಕಿ ಫ್ರೆಂಚ್ರಾಕ್ಸ್ ಸಬ್ ಡಿವಿಜ್ಞಗೆ ಕೇರಿದ ತಾಲ್ಲೂಕುಗಳದು ಸಬ್ ಡಿವಿಜ್ ಆಫಿಸರವರಲ್ಲಿಯೂ ಇತರ ತಾಲ್ಲೂಕುಗಳದು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಲ್ಲಿಯೂ ಮಂಜೂರಾತಿಗೆ ವಳಪಟ್ಟು ಯಿರತಕ್ಕದ್ದು.

ಆರ್. ಬಿ. ವ್ಯೋಮರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಪ್ರಕಟನೆ.

ತಾರೀಖು 30ನೇ ಏಪ್ರಿಲ್ 1890.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖು ವರಿಗೆ ಹಿಡಿಯಲ್ಪಡುವ ಆನೆಗಳು ಸಹ 1890ನೇ ಇಸವಿ ಜೂನ್ ತಾರೀಖು 16ರಲ್ಲು ಮೈಸೂರಿನಿಂದ 20 ಮೈಲಿ ಫಾಸಲೆಯಲ್ಲಿ ಯಿರುವ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಮೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕರ್ಸರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಹೆಸರು.	ಜಾತಿ.	ಯತ್ತರ ಅಡಿ	ಅಂಗುಲ.	ಹಿಡಿದ ತಾರೀಖು.	ಏರು.
1	ನರಸುಹ್ಮ ..	ಗಂಡು	6	6	21—2—90	
2	ಚಂದ್ರಶೇಖರ ..	ಡಿಟೋ	4	9	14—3—90	
3	ವರಲಕ್ಷ್ಮಿ ..	ಹೆಣ್ಣು	6	0	ಡಿಟೋ	
4	ಗಜಲಕ್ಷ್ಮಿ ..	ಡಿಟೋ	7	6	ಡಿಟೋ	

ಪರತ್ತುಗಳು—ಸರ್ಕಾರದ ಹರಾಜ್ ಖೈದಾದ ಕೂಡ್ಲೆ ಚಡ ದರಖಾಸ್ತುದಾರನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂ ಪಾಯಿ ಶೇವಣಿಯನ್ನ ಪಾವತಿ ಮಾಡತಕ್ಕದ್ದು, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತಿ ಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಶೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ, ಮತ್ತು ಸದರೀ ಆನೆಗಳು ಪುನಹ ಹರಾಜು ಮಾಡುವದರಲ್ಲಿ ಪೊರ್ಟಾಗ ಬಹುದಾವ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ, ನಫೆ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲ. ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಬಿ. ರಾಮಸ್ವಾಮಯ್ಯರ್,
ಆಫಿಸಿಯೇಟಿಂಗ್ ಅಸಿಸ್ಟೆಂಟ್ ಕರ್ಸರ್ವೇಟರ್.

ಹಾಸನ ಡಿಸ್ಟ್ರಿಕ್ಟ್.

ಸ್ರ್ 1890ನೇ ಇಸವಿ 21ನೇ ಏಪ್ರಿಲ್.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಹಾಸನ ಡಿಸ್ಟ್ರಿಕ್ಟ್ ಚನ್ನರಾಯಪಟ್ಟ್ಣ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಪ್ತಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಚನ್ನರಾಯಪಟ್ಣ ತಾಲ್ಲೂಕು ಕಛೇರಿಯಲ್ಲಿ ಸ್ರ್ 1890ನೇ ಇಸವಿ ಮೇ ತಾರೀಖು 19ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುವರು.

3. ಈ ಹರಾಜಿನ ಚಡ ದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡುವ ಪರಿಯಂತ ಖಾಯಮಾದ್ದಾಗಿ ತಿಳಿದುಕೊಳ್ಳ ಕೂಡದು.

4. ಈ ಇಜಾರೆಯು ಸ್ರ್ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ತರತಕ್ಕದ್ದು.